ಅ) ಸದರಿ ಶಾಲೆಗಳು ಪ್ರಾರಂಭವಾದ 7 ವರ್ಷಗಳ ಅವಧಿ ಮುಗಿದ ನಂತರ ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಪಾಲಿಸಿದ್ದಲ್ಲಿ ಅನುದಾನಕ್ಕೆ ಒಳಪಡಿಸಲು ಅರ್ಹತೆ ಪಡೆಯುತ್ತವೆ. ಆದರೆ, ಈ ನಿಯಮವು ಶಾಶ್ವತ ಅನುದಾನ ರಹಿತವಾಗಿ ಮಂಜೂರಾದ ಶಾಲೆಗಳಿಗೆ ಅನ್ವಯಿಸುವುದಿಲ್ಲ.

ರಾಜ್ಯದಲ್ಲಿರುವ ವನ್ಯ ಮೃಗಗಳ ರಕ್ಷಣೆ

580 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು?

ಆ) ವನ್ಯ ಮೃಗಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಮೈಸೂರು ಮೃಗಾಲಯದಲ್ಲಿ ತಪ್ಪಿಸಿಕೊಂಡಿದ್ದ ಹೆಬ್ಬಾವುಗಳು ಮತ್ತೆ ಸಿಕ್ಕಿವೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 305

ಆ) ವನ್ಯ ಪ್ರಾಣಿ ಹಾಗೂ ಅವುಗಳ ಆವಾಸ ಸ್ಥಳಗಳಿಗೆ ರಕ್ಷಣೆ ಒದಗಿಸಲು ಹಲವಾರು ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಇ) ಸಿಕ್ಕಿವೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕಿಯರ ಪ್ರೌಢಶಾಲೆಗಳು

581 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕಿಯರ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು?

ಆ) ಅವರಿಗೆ ಊಟಕ್ಕೆ ಮತ್ತು ಬಟ್ಟೆಗೆ ಕೊಡುವ ಹಣವೆಷ್ಟು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪಂಗಡದ ವಸತಿ ಪ್ರೌಢಶಾಲೆ ಈ ಕೆಳಗಿನಂತಿವೆ :

1. **ಬೆಂಗಳೂರು ವಿಭಾಗ**
1. ಮಾಯಕೊಂಡ ಚಿತ್ರದುರ್ಗ ಜಿಲ್ಲೆ
2. **ಮೈಸೂರು ವಿಭಾಗ**
2. ನಂಜನಗೂಡು ಮೈಸೂರು ಜಿಲ್ಲೆ
3. **ಗುಲ್ಬರ್ಗಾ ವಿಭಾಗ**
3. ಗುಲ್ಬರ್ಗಾ
4. **ಬೆಳಗಾವಿ ವಿಭಾಗ**
4. ಬಾಗಲಕೋಟೆ ಬಿಜಾಪುರ ತಾಲ್ಲೂಕು